
# ಸಂಪಾದಕೀಯ

# ಮಾನವ ಮುಸುಕಿನಲ್ಲಿ ದಿವ್ಯತೆಯ ಹೊಳಪು

## ತಾತ್ತ್ವಿಕ ಸಮನ್ವಯ

ಶ್ರೀರಾಮಕೃಷ್ಣರು ಸಮನ್ವಯ ಮೂರ್ತಿ. ಅವರು ಆಧ್ಯಾತ್ಮಿಕ ಕ್ಷೇತ್ರದ ಎಲ್ಲ ಆಯಾಮಗಳಲ್ಲಿಯೂ ಸಮನ್ವಯವನ್ನು ಸಾಧಿಸಿ, ಬೋಧಿಸಿದ ಮಹನೀಯರು. ಹಾಗೆಯೇ ತಾತ್ತ್ವಿಕ ವಿಚಾರದಲ್ಲಿಯೂ ಅವರು ಸಮನ್ವಯವನ್ನೇ ಬೋಧಿಸಿದರು. ಪರಂಪರಾನುಗತ ವೇದಾಂತವು ಬ್ರಹ್ಮನು ನಿರ್ಗುಣ, ನಿರ್ವಿಕಾರ; ಆ ಪರತತ್ತ್ವದ ಕ್ರಿಯಾತ್ಮಕ ಅಂಶವಾದ ಪ್ರಕೃತಿ ಅಥವಾ ಮಾಯೆಯು ತ್ಯಾಜ್ಯ ಎಂದು ಹೇಳುತ್ತದೆ. ಭಕ್ತಿಶಾಸ್ತ್ರಗಳು ಕೂಡ ಪುರುಷರೂಪಿ ಭಗವಂತನೇ ಶ್ರೇಷ್ಠ, ದೇವಿಯು ಅವನಿಗಿಂತ ಕೆಳಮಟ್ಟದವಳು ಎಂಬ ಭಾವನೆಯನ್ನೇ ಹೊಂದಿವೆ. ಇದು ಕಾಲಾಂತರದಲ್ಲಿ ಭಾರತೀಯ ಸಮಾಜವು ಪುರುಷ ಪ್ರಧಾನವಾಗಿ ಮಾರ್ಪಟ್ಟಿದ್ದರಿಂದ ಉಂಟಾಗಿರುವ ವಿಕೃತಿಯೇ ಹೊರತು, ವೇದಗಳಾಗಲೀ ಉಪನಿಷತ್ತುಗಳಾಗಲೀ, ಈ ಭಾವನೆಗೆ ಇಂಬು ಕೊಟ್ಟ ಹಾಗೆ ಕಾಣುವುದಿಲ್ಲ. ಶ್ರೀರಾಮಕೃಷ್ಣರು ತಾತ್ತ್ವಿಕ ನೆಲೆಯಲ್ಲಿ ಮಾಡಿದ ದೊಡ್ಡ ಕೆಲಸವೆಂದರೆ, 'ಬ್ರಹ್ಮ' ಮತ್ತು ಅದರ 'ಶಕ್ತಿ' – ಇವೆರಡೂ ಅಭೇದ ಎಂದು ಸಮನ್ವಯ ಮಾಡಿ ತೋರಿಸಿದ್ದು. ಅದಕ್ಕೆ ಅವರು ಕೊಡುವ ಉದಾಹರಣೆಯೂ ಚೇತೋಹಾರಿ. ನಿಶ್ಚೇತನವಾಗಿ ಮಲಗಿರುವ ಹಾವು ಬ್ರಹ್ಮವನ್ನು ಸೂಚಿಸುತ್ತದೆ; ಸರಿದಾಡುವ ಹಾವು ಶಕ್ತಿಯನ್ನು ಸೂಚಿಸುತ್ತದೆ. ಮಲಗಿದ್ದ ಹಾವೇ ಈಗ ಸರಿದಾಡುತ್ತಿದೆಯಲ್ಲವೇ? ಹಾಗೆಯೇ ನಿರಪೇಕ್ಷವಾಗಿ, ಪ್ರಪಂಚಾತೀತ ದೃಷ್ಟಿಯಿಂದ ಭಾವಿಸಿದಾಗ ಪರತತ್ತ್ವವು ನಿರ್ಗುಣವಾಗಿ ಭಾಸವಾಗುತ್ತದೆ. ಅದನ್ನೇ ಈ ದೃಷ್ಟ ಪ್ರಪಂಚವನ್ನು ಗಮನದಲ್ಲಿಟ್ಟುಕೊಂಡು ಪರಿಭಾವಿಸಿದಾಗ, ಪ್ರಪಂಚದ ಮೂಲವಾದ ಆದ್ಯಾಶಕ್ತಿಯೆಂಬಂತೆ ಸಗುಣ ರೂಪದಲ್ಲಿ ಗೋಚರಿಸುತ್ತದೆ. ಹೀಗೆ ಬ್ರಹ್ಮ–ಶಕ್ತಿ, ಕೃಷ್ಣ–ಕಾಳಿ– ಮುಂತಾದ ದೇವತಾರೂಪಗಳಲ್ಲಿ ಸಮನ್ವಯವನ್ನು ಶ್ರೀರಾಮಕೃಷ್ಣರು ಸಾಧಿಸಿದರು. ಇದು ಶಾಸ್ತ್ರಸಮ್ಮತವಾದ ಸಮನ್ವಯ. ಈ ಪರಿಶುದ್ಧ ಸಮನ್ವಯ ತತ್ತ್ವವನ್ನು ಶಾಸ್ತ್ರವಿಹಿತವೆಂದು ಆಧುನಿಕ ಕಾಲದಲ್ಲಿ ಎತ್ತಿ ತೋರಿಸಿದ್ದು ಶ್ರೀರಾಮಕೃಷ್ಣರು ಮಾಡಿದ ಮಹಾನ್ ಕಾರ್ಯಗಳಲ್ಲಿ ಒಂದು.

ಅವತಾರಪುರುಷರ ಕಾರ್ಯ ಕೇವಲ ಬೋಧನೆಯಲ್ಲ. ಅದನ್ನು ತಮ್ಮ ಜೀವನದಲ್ಲಿ ಪರಿಪೂರ್ಣವಾಗಿ ಅನುಷ್ಠಾನಕ್ಕೆ ತಂದುಕೊಂಡು, ಲೋಕದ ಜನರಿಗೆ ಆದರ್ಶವಾಗುವುದೂ ಅತಿ ಮುಖ್ಯವಾದ ಕಾರ್ಯ. ಶ್ರೀರಾಮಕೃಷ್ಣರ ವಿಶೇಷವೆಂದರೆ, 'ಬ್ರಹ್ಮ', 'ಶಕ್ತಿ' ಗಳ ವಿಷಯದಲ್ಲಿ ತಾವು ಸಾಧಿಸಿದ ತಾತ್ತ್ವಿಕ ಸಮನ್ವಯವನ್ನು ಅತ್ಯಂತ ಮನೋಜ್ಞವಾದ ರೀತಿಯಲ್ಲಿ ಅನುಷ್ಠಾನಯೋಗ್ಯವನ್ನಾಗಿಯೂ ಜಗತ್ತಿಗೆ ತೋರ್ಪಡಿಸಿದ್ದು. ಅದಕ್ಕಾಗಿ ಅವರು ತಮ್ಮ 'ಶಕ್ತಿಸ್ವರೂಪಿಣಿ' ಯಾಗಿ ಲೋಕಕ್ಕೆ ಪರಿಚಯಿಸಿದ ಮಹಿಳಾಮಣಿಯೇ ಶ್ರೀಮಾತೆ ಶಾರದಾಮಣಿದೇವಿಯವರು.




## ರಾಮಕೃಷ್ಣ ಸಂಗಿನಿ

ಹಿಂದಿನ ಅವತಾರಪುರುಷರ ದಿವ್ಯಕರ್ಮಗಳನ್ನು ಪರೀಕ್ಷಿಸಿದಾಗ, ಅವರ ಸ್ತ್ರೀಸಂಗಾತಿಗಳ ಪಾತ್ರವು ಅಷ್ಟೊಂದು ಹಿರಿದಾಗಿರಲಿಲ್ಲ ಎನ್ನುವುದು ನಮಗೆ ಕಂಡುಬರುತ್ತದೆ. ಆದರೆ ಶ್ರೀರಾಮಕೃಷ್ಣರು ಮೊದಲಿನಿಂದಲೂ ಶ್ರೀಮಾತೆಯವರನ್ನು ತಮಗೆ ಸಮಾನವಾದ ದಿವ್ಯ ಅಭಿವ್ಯಕ್ತಿಯನ್ನು ಹೊಂದಿದವರೆಂದೇ ಕಂಡಿದ್ದರು ಮಾತ್ರವಲ್ಲ, ಆ ಭಾವಕ್ಕೆ ತಕ್ಕ ಹಾಗೆ ಅವರೊಡನೆ ಪೂಜ್ಯ ಭಾವನೆಯಿಂದ, ಗೌರವಾದರಗಳಿಂದ ವರ್ತಿಸುತ್ತಿದ್ದರು. ಹೀಗೆ ಅವರು ಪರೋಕ್ಷವಾಗಿ, ಇಡೀ ನಾರೀಕುಲಕ್ಕೇ ಅತ್ಯಂತ ಶ್ರೇಷ್ಠ ಸ್ಥಾನವನ್ನು ಕಲ್ಪಿಸಿಕೊಟ್ಟರು. ಮತ್ತೆ, ಮುಂದೆ ಧಾರ್ಮಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಜರುಗಿದ ಸ್ತ್ರೀಯರ ಶ್ರೇಯೋಭಿವೃದ್ಧಿಯ ಆಂದೋಲನಕ್ಕೆ ಆಧ್ಯಾತ್ಮಿಕ ಮತ್ತು ಅನುಭಾವಿಕ ಅಡಿಪಾಯವನ್ನು ಹಾಕಿದರು. ಅವರು ಮೇಲಿನ ಕಾರ್ಯವನ್ನು ನಿರ್ವಹಿಸಿದ್ದು, ಶ್ರೀಮಾತೆಯವರನ್ನು ನಾರೀಕುಲದ ಅನರ್ಘ್ಯ ರತ್ನವನ್ನಾಗಿ ರೂಪಿಸಿ, ಆರಾಧಿಸಿ, ತಮ್ಮ ಜಗತ್ಕಲ್ಯಾಣದ ಪುಣ್ಯ ಕಾರ್ಯವನ್ನು ಅವರಿಗೆ ವಹಿಸುವ ಮೂಲಕ. ಹೀಗೆ ಶ್ರೀಮಾತೆಯವರು ಸಮಸ್ತ ಸ್ತ್ರೀಜನಾಂಗದ ಆದರ್ಶವಾಗಿ, ಆ ಸಮುದಾಯದ ಕೀಳರಿಮೆಯನ್ನು ತೊಡೆದುಹಾಕಿ, ಘನತೆ ಮತ್ತು

> ನಿನ್ನ ಲೀಲೆಗಳನು ಬೆರಗಿನಲಿ ನೋಡಿ
> ನಗಬೇಕೋ ಅಳಬೇಕೋ ತಿಳಿಯದಾಗಿದೆ ನನಗೆ!
> ಮಕ್ಕಳಾಡುವ ತೆರದಿ ಈ ಜಗದ ಸಂತೆಯಲಿ
> ಕಟ್ಟುವವಳೂ ನೀನೆ, ಕೆಡಹುವವಳು ನೀನೆ!
> ಎನಿತೊ ಕಾಲದಿ ನಿನ್ನ ಬಳಿಯೆ ನಾನಿದ್ದರೂ
> ನನ್ನ ಸೋಲು ನಾನು ಒಪ್ಪಿಕೊಳ್ಳುವೆನೀಗ –
> ಅರಿಯದಾದೆನು ನಿನ್ನ ಎಂದೆಂದಿಗೂ!
>
> – ಸ್ವಾಮಿ ಶಾರದಾನಂದ

ಗೌರವಗಳನ್ನು ಪ್ರತಿಷ್ಠಾಪಿಸಿಕೊಟ್ಟರು. ಆ ಮೂಲಕ ಒಬ್ಬ ಹೆಣ್ಣು ಮಗಳು, ತನ್ನಲ್ಲಿ ಎಂತಹ ಸಾಮರ್ಥ್ಯ ಮತ್ತು ಶಕ್ತಿಗಳನ್ನು ಪ್ರಕಟಪಡಿಸಬಹುದು ಎಂಬುದಕ್ಕೆ ಸಾಕ್ಷಿಯಾದರು. ಇದರ ಫಲವಾಗಿ **ಪವಿತ್ರತೆ, ಸರಳತೆ, ಸಮಾನತೆ, ನಿಸ್ಪೃಹತೆ**ಗಳೆಂಬ ಹಲವು ಧಾರೆಗಳಲ್ಲಿ ಹರಿಯುವ, **ಪರಿಶುದ್ಧ ವಾತ್ಸಲ್ಯವೇ** ಜೀವಾಳವಾಗುಳ್ಳ, **ಮಾತೃತ್ವ**ವೆಂಬ ಪುಣ್ಯಗಂಗಾವಾರಿಧಿಯು ಶ್ರೀಮಾತೆಯವರ ಮಾತೃಗರ್ಭದಿಂದ ಹೊರಟು, ಪಾಪಿತಾಪಿಗಳೆನ್ನದೆ ಸಾವಿರಾರು ಜನರ ಮಡಿಲನ್ನು ತುಂಬಿತು, ಈಗಲೂ ತುಂಬುತ್ತಿದೆ.

ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಸೂರ್ಯ. ಅದರ ಪ್ರಖರತೆ ಅನನ್ಯ. ಆದರೆ ಶ್ರೀಮಾತೆಯವರು ಅದೇ ಆಧ್ಯಾತ್ಮಿಕ ಬೆಳಕನ್ನು ತಂಬೆಳಕಾಗಿ ಸೂಸುತ್ತ, ದೌರ್ಬಲ್ಯದಿಂದ ಬೆಂದ ಹೃದಯ ಗಳನ್ನು ತಣಿಸುತ್ತಾರೆ. ಶ್ರೀರಾಮಕೃಷ್ಣರೆಂಬ ಸೂರ್ಯನ ಬೆಳಕನ್ನೇ ಚಂದ್ರನಂತೆ ತಂಪೆನಿಸುವ ರೀತಿಯಲ್ಲಿ ಅತ್ಯಂತ ಜನಸಾಮಾನ್ಯರಿಗೂ ಹರಿಸಿದ ಕರುಣಾಮಯಿ ಶ್ರೀಮಾತೆ.

### ಜಗನ್ಮಾತೃ ಸ್ವರೂಪಿಣಿ

ಶ್ರೀಶಾರದಾದೇವಿಯವರ ವ್ಯಕ್ತಿತ್ವದ ಸ್ರೋತವೇ ಅವರ ಮಾತೃತ್ವ. ತಾಯ್ತನವೆಂಬುದು ದೈಹಿಕ ಪರಿಧಿಯನ್ನಷ್ಟೇ ಅಲ್ಲ, ಮಾನವರು ತಮ್ಮ ಮಧ್ಯೆ ಕಲ್ಪಿಸಿಕೊಂಡಿರುವ ಎಲ್ಲ ಬಗೆಯ ಅಡ್ಡಗೋಡೆಗಳನ್ನೂ ಮೀರಬಲ್ಲದು ಎನ್ನುವುದಕ್ಕೆ ಉತ್ತಮ ನಿದರ್ಶನ ಶ್ರೀಮಾತೆಯವರು. ಇಲ್ಲಿ ತಾಯ್ತನವು ಭಾವನಾತ್ಮಕ ನೆಲೆಯನ್ನೂ ಮೀರಿ ಆಧ್ಯಾತ್ಮಿಕ ನೆಲೆಯನ್ನು ಮುಟ್ಟುತ್ತದೆ, ಎಲ್ಲ ಬಗೆಯ ಸಂದರ್ಭದಲ್ಲಿಯೂ ಎಲ್ಲ ಬಗೆಯ ಜನರಿಗೂ ಅಮೃತಸಿಂಚನವನ್ನು ನೀಡುವ ಪರಿಶುದ್ಧ ಮಾತೃವಾತ್ಸಲ್ಯವಾಗಿ ಪರಿಣಮಿಸುತ್ತದೆ. ಇದನ್ನೇ ನಾವು ಶ್ರೀಮಾತೆಯವರ ವ್ಯಕ್ತಿತ್ವದಲ್ಲಿ ನೋಡುವುದು.

ಮಾತೃತ್ವವು ಶ್ರೀಮಾತೆಯವರಲ್ಲಿ ಸುಂದರವಾದ ಹೂವಿನ ಕಂಪಿನಂತೆ ಅತ್ಯಂತ ಸಹಜ ಮತ್ತು ನೈಸರ್ಗಿಕವಾಗಿತ್ತು. ಎಷ್ಟೋ ಜನ ಭಕ್ತರು, ಸಾಧು ಬ್ರಹ್ಮಚಾರಿಗಳು ಶ್ರೀಮಾತೆಯವರಲ್ಲಿ ತಮ್ಮ ಹೆತ್ತ ತಾಯಿಯ ಪ್ರತಿರೂಪವನ್ನೇ ಕಾಣುತ್ತಿದ್ದರು. ಒಮ್ಮೆ ಶ್ರೀರಾಮಕೃಷ್ಣರ ಭಕ್ತ ಗಿರೀಶಚಂದ್ರ ಘೋಷನು "ಅಮ್ಮ, ನೀವು ನನಗೆ ಎಂತಹ ತಾಯಿ?" ಎಂದು ಕೇಳಿದನು. ಅದಕ್ಕೆ ಅವರು ಕೊಟ್ಟ ಉತ್ತರ, "ನಿನ್ನ ನಿಜವಾದ ತಾಯಿ ಕಣಪ್ಪ. ನಿನ್ನ ಗುರುವಿನ ಪತ್ನಿ ಮಾತ್ರವಲ್ಲ, ನಿನ್ನ ಸಾಕುತಾಯಿಯೂ ಅಲ್ಲ, ಕಲ್ಪನೆಯ ತಾಯಿಯೂ ಅಲ್ಲ, ನಿನ್ನ ನಿಜವಾದ ತಾಯಿ" ಎಂದೇ ಆಗಿತ್ತು. ಇನ್ನೊಂದು ಸಲ ಮುಂದೆ ಸ್ವಾಮಿ ಅರೂಪಾನಂದರೆಂದು ಪ್ರಸಿದ್ಧರಾದ ಬ್ರಹ್ಮಚಾರಿಗಳು, "ನೀವು ಎಲ್ಲರ ತಾಯಿಯೇನು?" ಎಂದು ಕೇಳುತ್ತಾರೆ. ಅದಕ್ಕೆ ಶ್ರೀಮಾತೆ ಉತ್ತರವಿತ್ತರು, "ಹೌದು." ಬ್ರಹ್ಮಚಾರಿಗಳು ಮತ್ತೆ ಪ್ರಶ್ನಿಸಿದರು, "ಬೇರೆ ಜೀವಜಂತುಗಳಿಗೂ ಕೂಡಾ?" ಅದಕ್ಕೆ ಶ್ರೀಮಾತೆಯವರು ದೃಢವಾಗಿ ಉತ್ತರಿಸಿದರು, "ಹೌದು, ಅವುಗಳಿಗೂ ಕೂಡ." ಇಲ್ಲಿ, ತಾಯ್ತನವು ದೈಹಿಕ ಸ್ತರವನ್ನು ಮೀರಿ, ಆಧ್ಯಾತ್ಮಿಕ ಭಾವವನ್ನು ತಾಳಿ, ವಿಶ್ವವ್ಯಾಪಿಯಾಗುವುದನ್ನು ನೋಡುತ್ತೇವೆ.

### ಯಾ ದೇವೀ ಸರ್ವಭೂತೇಷು..

ಶ್ರೀಮಾತೆಯವರ ಮಾತೃತ್ವದ ದೀವಿಗೆಯು ಹಲವು ಪ್ರಭಾ ಕಿರಣಗಳ ಮೂಲಕ ಪ್ರಕಟವಾಗಿದೆ. ಅವುಗಳಲ್ಲಿ ಸಮಾನ ದೃಷ್ಟಿಯೂ ಒಂದು. ಅದರ ಹಿನ್ನೆಲೆ ಮಾತೃವಾತ್ಸಲ್ಯವೇ. ಆ ಸಮಾನತೆಯು ದರೋಡೆಕೋರ ಅಮಜದ್ ಕೂಡ ನನ್ನ ಮಗನೇ ಎಂದು ಹೇಳುವಂತೆ ಮಾಡಿತು; ಬ್ರಿಟಿಷರೂ ನನ್ನ ಮಕ್ಕಳು ಎಂದು ಉದ್ಗರಿಸುವುದಕ್ಕೆ ಪ್ರೇರೇಪಣೆ ಇತ್ತಿತು; ಸಾವಿರಾರು ಮೈಲುಗಳಿಂದ ಬಂದ ನಿವೇದಿತಾ ಮೊದಲಾದ ಪಾಶ್ಚಾತ್ಯ ಹೆಣ್ಣುಮಕ್ಕಳನ್ನು ಆದರದಿಂದ ಬರಮಾಡಿಕೊಳ್ಳುವಂತೆ ಮಾಡಿತು; ಯಾವುದೋ ಊರಿನ ಅಪರಿಚಿತರು ಬಂದಾಗಲೂ ಅವರನ್ನು ಸತ್ಕರಿಸಿ, ಅವರು ಹೊರಟುನಿಂತಾಗ ದುಃಖಿಸುವಂತೆ ಮಾಡಿತು; ದೂರ ಪ್ರದೇಶಗಳ ಭಕ್ತರು ಮುಖತಃ ಅಥವಾ ಪತ್ರಗಳ ಮೂಲಕ ತಮ್ಮ ಕಷ್ಟಕಾರ್ಪಣ್ಯಗಳನ್ನು ಹೇಳಿಕೊಂಡಾಗ, ಕಣ್ಣೀರು ಸುರಿಸುವಂತೆ ಮಾಡಿತು; ಕಡೆಗೆ ತಮ್ಮ ಅಂತಿಮ ಸಂದೇಶವಾಗಿ, ಅನಾರೋಗ್ಯದ ಆ ದೈಹಿಕ ಯಾತನೆಯ ಮಧ್ಯದಲ್ಲಿಯೂ "ಯಾರಲ್ಲೂ ದೋಷವನ್ನು ಕಾಣಬೇಡ. ಯಾರೂ ಅಪರಿಚಿತರಲ್ಲ, ಮಗು. ಇಡೀ ಪ್ರಪಂಚವನ್ನೇ ನಿನ್ನದನ್ನಾಗಿ ಮಾಡಿಕೋ" ಎಂದು ಕಳಕಳಿಯಿಂದ ಬೋಧಿಸುವಂತೆ ಮಾಡಿತು. ಹೀಗೆ ಅದ್ವೈತ ತತ್ತ್ವವು ಅನುಭೂತಿಯೆಂಬಂತೆ ಚಿತ್ರಿಸುವ ಸಮಾನ ದೃಷ್ಟಿಯು ಮಾನವೀಯತೆಯ ಗುಣವಾಗಿ, ಅದರ ಅತ್ಯಂತ ಪರಿಶುದ್ಧ ಭಾವದಲ್ಲಿ ಶ್ರೀಮಾತೆಯವರಲ್ಲಿ ಪ್ರಕಟವಾಯಿತು, ಅದ್ವೈತ ಭಾವವನ್ನು ಇಟ್ಟುಕೊಂಡು ಬಾಳಿ ಎಂಬ ಗುರುದೇವರ ಬೋಧನೆಗೆ ಪ್ರತ್ಯಕ್ಷ ನಿದರ್ಶನ ಶ್ರೀಮಾತೆಯವರ ಬಾಳುವೆ.

### ಕರುಣಾಮಯಿ

ಭಗವಂತನ ಕರುಣೆಯೇ ಘನೀಭವಿಸಿ ಭುವಿಗೆ ಕೆಳಗಿಳಿದು ಬರುವುದರಿಂದ 'ಅವತಾರ' ಎಂಬ ಹೆಸರು ಬಂದಿತೆಂದು ಹೇಳುವರು. ಭಗವತ್ ಶಕ್ತ್ಯವತಾರರಾದ ಶ್ರೀಮಾತೆಯವರಲ್ಲಿ

ಅದು ಮಾತೃತ್ವವೆಂಬ ವಿಶೇಷ ರೂಪದಲ್ಲಿ ಪ್ರಕಟಹೊಂದಿತು. ಹಾಗೆಂದೇ, ಸ್ವಾಮಿ ಪ್ರೇಮಾನಂದರು ಹೇಳುವ ಹಾಗೆ, ಬೇರೆಯವರು ಅರಗಿಸಿಕೊಳ್ಳಲಾಗದ ಹಾಲಾಹಲ ವಿಷದಂತಹ ದುಷ್ಟ ಮತ್ತು ಪಾಪಪ್ರವೃತ್ತಿಯ ಜನರೂ ಶ್ರೀಮಾತೆಯವರಲ್ಲಿ ಆಶ್ರಯವನ್ನೂ, ಸಾಂತ್ವನವನ್ನೂ ಪಡೆದರು. ಸ್ವಾಮಿ ಪ್ರೇಮಾನಂದರು ಮುಂದುವರಿದು ಉದ್ಗರಿಸುತ್ತಾರೆ: "ತಾಯಿ, ತಾಯಿ, ನಿನಗೆ ಜಯವಾಗಲಿ, ತಾಯಿ! ನಿಮ್ಮ ನೋವು–ನಲಿವುಗಳಲ್ಲಿ, ಜಯ–ಅಪಜಯಗಳಲ್ಲಿ, ಸದಾ ಕಾಲದಲ್ಲಿ ಶ್ರೀಮಾತೆಯವರ ಅಪಾರ ಕರುಣೆಯನ್ನು, ಅಪಾರ ಕೃಪೆಯನ್ನು ನೆನಪಿಟ್ಟುಕೊಳ್ಳಿ, ಶ್ರೀಮಾತೆಗೆ ಜಯವಾಗಲಿ!" ಒಮ್ಮೆ ಭಕ್ತನೊಬ್ಬ ಶ್ರೀಮಾತೆಯವರಿಗೆ ತೊಂದರೆಯಾಗುವುದೆಂದು, ದೂರದಿಂದ ಪ್ರಣಾಮಗಳನ್ನು ಸಲ್ಲಿಸುತ್ತಾನೆ. ಅದಕ್ಕೆ ಅವರು ಹೇಳುತ್ತಾರೆ, "ನಾವು (ಶ್ರೀರಾಮಕೃಷ್ಣರೂ ಕೂಡಿಕೊಂಡು) ಬಂದಿರುವುದೇ ಈ ಉದ್ದೇಶಕ್ಕಾಗಿ. ನಾವು ಇತರರ ಪಾಪಗಳನ್ನು ಸ್ವೀಕರಿಸಿಕೊಂಡು, ಅರಗಿಸಿಕೊಳ್ಳದಿದ್ದರೆ, ಬೇರೆ ಯಾರು ತಾನೇ ಹಾಗೆ ಮಾಡುವರು? ಪಾಪಿ ತಾಪಿಗಳ ಜವಾಬ್ದಾರಿಯನ್ನು ಯಾರು ತಾನೇ ಹೊತ್ತುಕೊಳ್ಳುವರು?"

**ಪವಿತ್ರತಾ ಸ್ವರೂಪಿಣಿ**

ಸ್ವಾಮಿ ಅಭೇದಾನಂದರು, "ಯಾರ ಚಾರಿತ್ರ್ಯ, ಜೀವನಗಳು ಪರಿಶುದ್ಧವಾದವುಗಳೋ, ಅಂತಹ ಪವಿತ್ರತಾ ಸ್ವರೂಪಿಣಿಗೆ ನಮಸ್ಕಾರಗಳು" ಎಂದು ಶ್ರೀಮಾತೆಯವರಿಗೆ ಹೃದಯಂಗಮವಾದ ವಂದನೆಗಳನ್ನು ಸಲ್ಲಿಸುತ್ತಾರೆ. ಅವಳು ಅಷ್ಟೊಂದು ಪವಿತ್ರಳಾಗಿರದಿದ್ದರೆ, ನಾನೂ ಸಂಸಾರಮಾರ್ಗವನ್ನು ತುಳಿಯಬೇಕಾಗಿತ್ತೇನೋ ಎಂಬ ಶ್ರೀರಾಮಕೃಷ್ಣರ ಮಾತು ಅಚ್ಚರಿ ಹುಟ್ಟಿಸುತ್ತದೆ. ಶ್ರೀಮಾತೆಯವರೇ ಈ ಬಗ್ಗೆ ಹೀಗೆ ಹೇಳುತ್ತಾರೆ: "ನಾನು ಚಂದ್ರನನ್ನು ನೋಡಿದಾಗ, ಅವನಲ್ಲೂ ಹಲವು ಕಲೆಗಳನ್ನು ಕಂಡೆ. ಆಗ ಭಗವಂತನಲ್ಲಿ ಪ್ರಾರ್ಥಿಸಿಕೊಂಡೆ, 'ಪ್ರಭು, ಚಂದ್ರನಲ್ಲೂ ಕಲೆಗಳಿವೆ, ಆದರೆ ನನ್ನ ಮನಸ್ಸಿನಲ್ಲಿ ಯಾವ ಕಲ್ಮಶಗಳೂ ಸುಳಿಯದಿರಲಿ' ಎಂದು." ಅಂತಹ ನಿಷ್ಕಲ್ಮಷ ಚಾರಿತ್ರ್ಯವು ಶ್ರೀಮಾತೆಯವರದಾಗಿದ್ದರಿಂದಲೇ, ಶ್ರೀರಾಮಕೃಷ್ಣರು ಅವರ ಪರಿಶುದ್ಧ ತನುವಿನಲ್ಲಿ ಜಗನ್ಮಾತೆಯನ್ನು ಆವಾಹಿಸಿ, ಪೂಜಿಸಿದರು; ತಮ್ಮ ಸಾಧನಾಫಲವನ್ನೆಲ್ಲ ಸಮರ್ಪಿಸಿ, ಬಾಲಿಕೆ ಶಾರದೆಯನ್ನು ಗುರುಸ್ಥಾನಕ್ಕೆ ಏರಿಸಿದರು.

**ಕಷ್ಟಸಹಿಷ್ಣು**

ಶ್ರೀಮಾತೆಯವರು ತಮ್ಮ ಜೀವನದಲ್ಲಿ ಎರಡು ಬಗೆಯ ಸಂಕಷ್ಟಗಳಿಗೆ ಗುರಿಯಾಗಬೇಕಾಯಿತು. ೧. ಅವರು ಅನುಭವಿಸಿದ ಆಮಶಂಕೆ, ಸಂಧಿವಾತ ಮುಂತಾದ ವ್ಯಾಧಿಗಳ ಸರಣಿ ೨. ಅವರ ಬಂಧುಬಾಂಧವರು ಕೊಡುತ್ತಿದ್ದ ಮಾನಸಿಕ ಓಂಸೆ. ಅವರ ಜೀವನಚರಿತ್ರೆಯನ್ನು ಓದಿದಾಗ, ಒಬ್ಬ ಗ್ರಾಮೀಣ ಮಹಿಳೆಯ ಸ್ಪಜ ಸ್ಥಿತಿಗತಿಗಳ ಪರಿಚಯ ನಮಗಾಗುವುದು. ಈ ದೃಷ್ಟಿಯಲ್ಲಿ, ಶ್ರೀಮಾತೆಯವರು ಅಸಾಧಾರಣ ಕಷ್ಟಸಹಿಷ್ಣುವಾಗಿ, ಸಹನೆಯ ಮೂರ್ತಿಯಾಗಿ, ನಿರ್ಲಿಪ್ತತೆಯ ಅಪರಾವತಾರರಾಗಿ ಕಂಡುಬರುತ್ತಾರೆ. ಆ ಎಲ್ಲ ಕಷ್ಟಸಂಕುಲಗಳ ಕೆಸರಿನಲ್ಲಿ ಅವರು ನಡೆಸಿದ ತಾವರೆಯಂತಹ ನಿರ್ಮಲ ಬಾಳುವೆಯೇ ನಮ್ಮೆಲ್ಲರಿಗೂ ಅವರು ಆದರ್ಶಮಯರಾಗುವಂತೆ ಮಾಡುವುದು. ಶ್ರೀಮಾತೆಯವರು ಆಶ್ರಮದ ಪ್ರಶಾಂತ ಪರಿಸರದಲ್ಲಿ ವಾಸಮಾಡಿದ್ದರೆ, ಈ ವೈಶಿಷ್ಟ್ಯತೆ ಗಮನಕ್ಕೆ ಬಾರದೆ ಹೋಗಿಬಿಡುತ್ತಿತ್ತೇನೋ ಎಂದೆನಿಸುತ್ತದೆ. ಅಪ್ಪಟ ಸಂನ್ಯಾಸಿನಿಯಾಗಿದ್ದರೂ ಸಾಧಾರಣ ಕಷ್ಟಸಹಿಷ್ಣು ಗೃಹಿಣಿಯಂತೆ ಇದ್ದ ಅವರ ಹೊರನೋಟದ ಬಾಳುವೆ, ಶ್ರೀರಾಮಕೃಷ್ಣರ ಭಗವನ್ಮಯ ಜೀವನಕ್ಕೆ ಯಾವ ತೆರನಲ್ಲೂ ಕಿರಿದಾದುದಲ್ಲವೆಂದೇ ಹೇಳಬೇಕು. ಶ್ರೀರಾಮಕೃಷ್ಣರಲ್ಲಿ ದಿವ್ಯತೆಯ ಅನಾವರಣವು ಮುಕ್ತವಾಗಿದ್ದರೆ, ಶ್ರೀಮಾತೆಯವರಲ್ಲಿ ಅದು ಸರಳತೆಯ ಸೆರಗಿನಲ್ಲಿ ಅಡಗಿಕೊಂಡಿತ್ತು, ಅಷ್ಟೆ.

**ಸೇವಾದರ್ಶಿನಿ**

ಸಾಮಾನ್ಯವಾಗಿ ತಾಯಿ ತನ್ನ ಮಕ್ಕಳ ಸೇವೆಯನ್ನು ಮಾಡಲು ತವಕ ಪಡುತ್ತಾಳೆ. ಅಂತರಂಗದಲ್ಲಿರುವ ಪರಿಶುದ್ಧ ವಾತ್ಸಲ್ಯದ ಬಾಹ್ಯ ಅಭಿವ್ಯಕ್ತಿಯಾದ ಈ ಬಗೆಯ ಆರೈಕೆಯ ಮನೋಭಾವ ಸ್ವಯಂಪ್ರೇರಿತವಷ್ಟೇ ಅಲ್ಲ, ಸ್ವಭಾವಸಹಜವೂ ಆಗಿದೆ. ಬೇರೆಲ್ಲ ಪ್ರಾಣಿಗಳಿಗಿಂತಲೂ ಈ ಭಾವನೆ ಮಾನವನಲ್ಲಿ ದೀರ್ಘಕಾಲದವರೆಗೆ ಕಂಡುಬರುತ್ತದೆ. ಇದರಿಂದ ತಾಯಿ–ಮಗುವಿನ ನಡುವೆ, ದೈಹಿಕ ಸಂಬಂಧವನ್ನೂ ಮೀರಿದ ಆತ್ಮೀಯತೆ ಬೆಳೆಯುತ್ತದೆ.

ಇದು ಸಾಮಾನ್ಯ ತಾಯಂದಿರ ವಿಷಯವಾದರೆ, ಶ್ರೀಮಾತೆಯವರಲ್ಲಿ ಈ ಬಗೆಯ ತಾಯ್ತನವೆಂಬುದು ಆಧ್ಯಾತ್ಮಿಕ ಆಯಾಮವನ್ನು ತಳೆಯುವುದನ್ನು ನಾವು ಕಾಣುತ್ತೇವೆ. ಆ ಉನ್ನತ ಹಂತದ ಪ್ರಜ್ಞೆಯೇ ತನ್ನಡಿಗೆ ಬರುವ ಎಲ್ಲರನ್ನೂ ತನ್ನ ಮಕ್ಕಳೆಂದೇ ತಿಳಿದು ಸೇವೆ ಮಾಡುವ ಪ್ರವೃತ್ತಿಯನ್ನು ಅವರಲ್ಲಿ ಹುಟ್ಟುಹಾಕಿತ್ತು. ಹಾಗೆಂದೇ ಆ ಭಕ್ತ–ಮಕ್ಕಳ ಸೌಕರ್ಯಕ್ಕಾಗಿ, ಯೋಗಕ್ಷೇಮಕ್ಕಾಗಿ ಅವರು ಅತೀವ ಕಾಳಜಿಯನ್ನು ವಹಿಸುತ್ತಿದ್ದರು.

**ಸದ್ಗುರುಸ್ವರೂಪಿಣಿ**

ಶ್ರೀಮಾತೆಯವರು ಸಾಧಾರಣ ಅಭಿವ್ಯಕ್ತಿಯಲ್ಲಿ ಅಸಾಧಾರಣ ವ್ಯಕ್ತಿತ್ವವನ್ನು ತೋರ್ಪಡಿಸಿದವರು. ಇದು ಅವರು ಗುರುವಾಗಿ ವಹಿಸಿದ ಪಾತ್ರದಲ್ಲಿ ವಿಶೇಷವಾಗಿ ವೇದ್ಯವಾಗುತ್ತದೆ. ತಮ್ಮನ್ನು ಲೋಕಪಾವನೆಯಾಗಿ ರೂಪಿಸಿದ ಶ್ರೀರಾಮಕೃಷ್ಣರ ಆಶಯದಂತೆ, ಅವರು ಸಾವಿರಾರು ಭಕ್ತ–ಮಕ್ಕಳಿಗೆ ಮಂತ್ರದೀಕ್ಷೆಯನ್ನು ಕೊಟ್ಟು, ತಮ್ಮ ಮಡಿಲಿನಲ್ಲಿ ಆಶ್ರಯವನ್ನಿತ್ತರು. ಇಲ್ಲಿ ಅವರ ಸ್ವಭಾವಸಹಜ ಮಾತೃವಾತ್ಸಲ್ಯವೇ ಗುರುಭಾವವಾಗಿ ವ್ಯಕ್ತವಾಯಿತೇ ಹೊರತು, ಅವರಲ್ಲಿ ಗುರುಸ್ಥಾನದ ಕೃತಕತೆಯನ್ನು ನಾವು ಕಾಣುವುದಿಲ್ಲ. ತಮ್ಮಲ್ಲಿಗೆ ಬಂದ ಎಲ್ಲ ಬಗೆಯ ಜನರಿಗೂ ಅವರು ಸಾಂತ್ವನ, ಭರವಸೆಗಳನ್ನು ನೀಡಿದುದಲ್ಲದೆ, ಅವರುಗಳ

ಆಧ್ಯಾತ್ಮಿಕ ಪ್ರಗತಿಯ ಜವಾಬ್ದಾರಿಯನ್ನೂ ಹೊತ್ತುಕೊಂಡರು. ಹೀಗೆ ಗುರುವಾಗಿಯೂ ಶ್ರೀಮಾತೆಯವರು ವಿಶೇಷತೆಯನ್ನು ಮೆರೆಯುವುದನ್ನು ನಾವು ಕಾಣುತ್ತೇವೆ.

**ಸ್ತ್ರೀಸಮಾಜೋದ್ಧಾರಿಣಿ**

"ಶ್ರೀರಾಮಕೃಷ್ಣರು ಭಾರತೀಯ ಸ್ತ್ರೀಸಮಾಜದ ಮುಂದಿರಿಸಿದ ಆದರ್ಶ" ವೆಂದು ಸೋದರಿ ನಿವೇದಿತಾ ಶ್ರೀಶಾರದಾದೇವಿಯವರನ್ನು ಬಣ್ಣಿಸುತ್ತಾರೆ. ಶ್ರೀಮಾತೆಯವರು ಭಾರತೀಯ ಸಂಸ್ಕೃತಿಯು ಒಬ್ಬಳು ಸ್ತ್ರೀಯಿಂದ ಅಪೇಕ್ಷಿಸುವ ಎಲ್ಲ ಪಾವನ ಗುಣಗಳ ಆಗರವಾಗಿದ್ದರು ಮಾತ್ರವಲ್ಲ, ಆಗ ತಾನೇ ಅಡಿಯಿಡುತ್ತಿದ್ದ ಆಧುನಿಕತೆಯನ್ನು, ಯಾವ ಸಂಕೋಚವೂ ಇಲ್ಲದೆ ಬರಮಾಡಿಕೊಂಡ ಉದಾರಹೃದಯದವರೂ ಆಗಿದ್ದರು. ತಾವೇ ಸ್ವತಃ ಶಾಲಾಶಿಕ್ಷಣದಿಂದ ವಂಚಿತರಾಗಿದ್ದರೂ ಕೂಡ, ತಮ್ಮ ಬಳಿ ಬಂದ ಹೆಣ್ಣುಮಕ್ಕಳನ್ನು ವಿದ್ಯಾಭ್ಯಾಸ ಮಾಡುವಂತೆ ಪ್ರೋತ್ಸಾಹಿಸುತ್ತಿದ್ದರು. ನಮಗೆ ಇಂದಿಗೂ ಆಶ್ಚರ್ಯವನ್ನುಂಟು ಮಾಡುವ ಸಂಗತಿಯೆಂದರೆ, ವಿವಾಹದ ಬಗೆಗಿನ ಅವರ ಕ್ರಾಂತಿಕಾರಕ ಅಭಿಪ್ರಾಯ. ಮದುವೆಯೆಂಬುದು ಒಬ್ಬ ಹೆಣ್ಣುಮಗಳಿಗೆ ಅನಿವಾರ್ಯವೆಂದು ಪರಿಗಣಿಸಲ್ಪಡುತ್ತಿದ್ದ ಕಾಲದಲ್ಲಿ, ಮದುವೆಗಿಂತಲೂ ವಿದ್ಯಾಭ್ಯಾಸದಿಂದ ಒದಗಿಬರುವ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಗಳೇ ಮುಖ್ಯ ಎಂದು ಮುಕ್ತವಾಗಿ ಅಭಿಪ್ರಾಯಪಡುತ್ತಿದ್ದ ಶ್ರೀಮಾತೆಯವರು ಅಚ್ಚರಿ ಮೂಡಿಸದೇ ಇರಲಾರರು!

**ಸಮಾಜಸುಧಾರಕಿ**

ಶ್ರೀಮಾತೆಯವರದು ನೀರವ, ಮೌನ ವ್ಯಕ್ತಿತ್ವ. ಅವರ ಕಾಲದ ಮಡಿವಂತಿಕೆಯ ಪರಿಸರದ ಮಧ್ಯೆ ಇದ್ದುಕೊಂಡೂ ಸದ್ದಿಲ್ಲದ ಸಾಮಾಜಿಕ ಕ್ರಾಂತಿಯೊಂದನ್ನು ಹುಟ್ಟುಹಾಕಿದ ಹೆಗ್ಗಳಿಕೆ ಅವರದು. ಜಾತಿಪಂಗಡಗಳ ಕಟ್ಟುಪಾಡುಗಳು ಬಿಗಿಯಾಗಿದ್ದ ಸಮಯದಲ್ಲಿ, ಸಾಂಪ್ರದಾಯಿಕ ಹಳ್ಳಿಯ ಪರಿಸರದಲ್ಲಿ ಕೂಡ, ಯಾರಿಗೂ ನೋವನ್ನುಂಟುಮಾಡದ ರೀತಿಯಲ್ಲಿ, ಎಲ್ಲರಿಗೂ ಸಮಾನ ಸ್ಥಾನವನ್ನು, ಆದರವನ್ನು, ಘನತೆಯನ್ನು ಕೊಟ್ಟು ಶ್ರೀಮಾತೆಯವರು ತಮ್ಮದೇ ಆದ ವಿಶಿಷ್ಟರೀತಿಯಲ್ಲಿ ಸಮಾಜ ಸುಧಾರಣೆಯನ್ನು ಮಾಡಿದರು. ತಮ್ಮ ಸ್ವಚ್ಛ, ಪರಿಶುದ್ಧ ಪ್ರೇಮಪ್ರವಾಹದ ರಭಸಕ್ಕೆ ಮೇಲು–ಕೀಳುಗಳ ಎಲ್ಲ ವೈಷಮ್ಯವೂ ಕೊಚ್ಚಿಹೋಗುವಂತೆ ಮಾಡಿದರು. ಎಲ್ಲ ವರ್ಗದ ಜನರು ಅವರ ವಾತ್ಸಲ್ಯದ ಸುಧೆಗೆ ಭಾಜನರಾದರು. ಇದು ಅಂದಿನ ಮಡಿವಂತ ವರ್ಗದವರ ಹುಬ್ಬನ್ನೇರಿಸಿತಾದರೂ, ಶ್ರೀಮಾತೆಯವರು ತಮ್ಮ ನಿರ್ವ್ಯಾಜ ಪ್ರೇಮದಿಂದ ಅವರ ಮನಸ್ಸನ್ನೂ ನಿಧಾನವಾಗಿ ಪರಿವರ್ತಿಸಿದರು. ಹೀಗೆ ಅವರು ದ್ವೇಷ–ಸಂಘರ್ಷಗಳಿಲ್ಲದ ಕ್ರಾಂತಿಯೊಂದರ ಹರಿಕಾರರಾದರು.

**ಅಭಯಾಂ ವರದಾಂ..**

ಎಲ್ಲಕ್ಕಿಂತ ಮುಖ್ಯವಾಗಿ ಭಯ, ಕಳವಳ, ಅನಿಶ್ಚಿತತೆ ಮತ್ತು ಸಂದಿಗ್ಧತೆಗಳಿಂದ ಬಳಲುತ್ತಿರುವ ಸಮಾಜಕ್ಕೆ 'ಅಭಯಪ್ರದಾಯಿನಿ' ಯಾಗಿ ಶ್ರೀಮಾತೆ ಶಾರದಾದೇವಿಯವರು ಕಾಣಬರುತ್ತಾರೆ. ಜನಸಾಮಾನ್ಯರಾದ ನಾವು ಆಧ್ಯಾತ್ಮಿಕ ಔನ್ನತ್ಯವನ್ನು ಏರುವುದು, ಆದರ್ಶದ ಪ್ರಖರತೆಯನ್ನು ಗ್ರಹಿಸುವುದು ಬಲು ಕಷ್ಟ. ಅದಕ್ಕಾಗಿ ದೀರ್ಘ ಕಾಲ ದೃಢಮನೋಭಾವನೆಯಿಂದ ಪ್ರಯತ್ನಿಸುವುದು ಇನ್ನಷ್ಟು ಕಠಿಣ. ಈ ಕರಾಳ ಪರಿಸ್ಥಿತಿಯಲ್ಲಿ, ನೋವಿನ ಅಂಧಕಾರದಲ್ಲಿ ಆಶೆಯ ಕಿರಣವಾಗಿ, ಹತಾಶೆಯ ಗಭೀರ ಕೂಪದಿಂದ ನಮ್ಮನ್ನೆತ್ತಿ ಬೆಳಕನ್ನು ಬೀರುವ, ಅಭಯ ಹಸ್ತವನ್ನು ಚಾಚಿ, ವಾತ್ಸಲ್ಯವನ್ನು ತೋರಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡುವ ದಿವ್ಯಚೇತನರಾಗಿ ಶ್ರೀಮಾತೆಯವರು ಕಂಗೊಳಿಸುತ್ತಾರೆ. ಸ್ವಾಮಿ ಅಭೇದಾನಂದರೆನ್ನುವಂತೆ ಪ್ರಪಂಚವೆಂಬ ಕುಲುಮೆಯಲ್ಲಿ ನೊಂದು ಬೆಂದ ಮನಸ್ಸಿಗೆ ಪ್ರೇಮಬಿಂದುವಿನ ಶೀತಲ ಸ್ಪರ್ಶವನ್ನಿತ್ತು, ಶಾಂತವನ್ನಾಗಿ ಮಾಡುವ ಅದಮ್ಯ ಶಕ್ತಿಸ್ವರೂಪಿಣಿ ಶ್ರೀಮಾತೆಯವರು. ಹೀಗೆ ಶುದ್ಧಪ್ರೇಮವೆಂಬ ಅತ್ಯಂತ ಮಾನವೀಯ ಆವಶ್ಯಕತೆಯನ್ನು ಶ್ರೀಮಾತೆಯವರು ಸಮರ್ಥವಾಗಿ ಪೂರೈಸುತ್ತಾರೆ.

**ಉಪಸಂಹಾರ**

ಶ್ರೀಮಾತೆಯವರ ಪವಿತ್ರ ದೇಹವನ್ನು ಬೇಲೂರು ಮಠದ ಗಂಗೆಯ ತಟದಲ್ಲಿ ಅಗ್ನಿಗೆ ಸಮರ್ಪಿಸಿದ ದಿನದಂದು, ಯಾರಿಗೂ ತೀವ್ರವಾದ ದುಃಖವಾಗಲೇ ಇಲ್ಲವಂತೆ. ಅಗಲಿಕೆಯ ದುಃಖವೂ ತಮ್ಮ ಮಕ್ಕಳಿಗೆ ಆಗಬಾರದು ಎಂದು ಆ ಮಹಾತಾಯಿ ಅವರ ಮನಸ್ಸುಗಳನ್ನು ಪ್ರಶಾಂತವಾಗಿಟ್ಟದ್ದಳೇನೋ! ಅದಾಗಿ ಎರಡು ದಿನಗಳ ನಂತರ ಸ್ವಾಮಿ ಶಿವಾನಂದಜಿ, ದುಃಖಿಸುತ್ತಿದ್ದ ಒಬ್ಬ ದಂಪತಿಗೆ ಹೀಗೆ ಹೇಳಿದರು: "ಶ್ರೀಮಾತೆಯವರು ಈಗ ಎಲ್ಲವನ್ನೂ ವ್ಯಾಪಿಸಿಕೊಂಡಿದ್ದಾರೆ. ಈಗವರು ಎಲ್ಲರಲ್ಲೂ ಇರುವರು. ಎಲ್ಲೆಲ್ಲಿಯೂ ಅವರನ್ನು ನೋಡಲು ಸಾಧ್ಯ. ಯಾರು ಏಕಾಗ್ರ ಮನಸ್ಸಿನಿಂದ ಅವರನ್ನು ಕರೆಯುವರೋ ಅವರಿಗೆ ಶ್ರೀಮಾತೆಯವರ ದರ್ಶನ ಲಭಿಸುವುದು. ಇದುವರೆಗೂ ಅವರು ಒಂದೇ ಸ್ಥಳಕ್ಕೆ ಸೀಮಿತರಾಗಿದ್ದರು. ಈಗ ಅವರು ಎಲ್ಲೆಲ್ಲಿಯೂ ಇರುವರು. ದುಃಖಕ್ಕೆ ಕಾರಣವಿಲ್ಲ, ಹೃದಯಾಂತರಾಳದಿಂದ ಉಕ್ಕಿಬರುವ ವ್ಯಾಕುಲತೆಯಿಂದ ಅವರನ್ನು ಕರೆದ ಕೂಡಲೇ ಅವರ ದರ್ಶನವಾಗುವುದು."

ಹೀಗೆ ಅತ್ಯಂತ ಮಾನವೀಯ ನೆಲೆಯಲ್ಲಿ ಅಸಾಮಾನ್ಯ ದಿವ್ಯತೆಯನ್ನು ಅತ್ಯಂತ ಸೌಮ್ಯವಾಗಿ ಶ್ರೀಮಾತೆಯವರು ಪ್ರಕಟಗೊಳಿಸುತ್ತಾರೆ. ಪರಿಶುದ್ಧ ಮಾನವೀಯತೆಯೇ ದಿವ್ಯತೆ, ನೈಜ ದಿವ್ಯತೆಯು ಅಭಿವ್ಯಕ್ತಗೊಳ್ಳುವುದು ಪರಿಪೂರ್ಣ ಮಾನವೀಯತೆಯಲ್ಲಿಯೇ ಎಂಬ ತಥ್ಯವನ್ನು ಅತ್ಯಂತ ಆಪ್ಯಾಯಮಾನವಾದ ರೀತಿಯಲ್ಲಿ ತಮ್ಮ ವ್ಯಕ್ತಿತ್ವದಲ್ಲಿ ಒಡಮೂಡಿಸಿಕೊಂಡ ಶ್ರೀಶಾರದಾದೇವಿಯವರು ನಿಜಕ್ಕೂ ಅದ್ಭುತಚರಿತ್ರರೇ ಸರಿ.